ತೆಗೆದಷ್ಟೂ ಮುಗಿಯುವುದಿಲ್ಲ. ನೀವು ನನ್ನನ್ನು ಕೊಲ್ಲಲು ಸಾಧ್ಯವೇ ಇಲ್ಲ' ಎಂದು ಹೇಳಿದ.

ರಾಕ್ಷಸ ದಂಪತಿ ಕಮ್ಮಾರನಿಗೆ ಕೈಮುಗಿದರು. 'ಪುಣ್ಯಾತ್ಮನೇ ನಮ್ಮ ತಪ್ಪನ್ನು ಮನ್ನಿಸು. ಈ ಮಹಿಮೆಯ ಬುರುಡೆಯನ್ನು ನಮಗೆ ಕೊಡು. ನೀನು ಏನು ಕೇಳಿದರೂ ಕೊಡುತ್ತೇವೆ' ಎಂದು ಬೇಡಿದರು. ಅವರ ಒತ್ತಾಯಕ್ಕೆಂಬಂತೆ ಕಮ್ಮಾರ ಒಪ್ಪಿಕೊಂಡ. 'ನಿಮ್ಮ ಈ ಹಳೆಯ ಕಡಾಯಿ ನನಗೆ ಕಬ್ಬಿಣ ಕಾಸಿ ಅದ್ದುವ ನೀರಿಡಲು ಬೇಕು. ಇದನ್ನು ಕೊಡುತ್ತೀರಿ ಎಂದಾದರೆ ಬುರುಡೆಯನ್ನು ನಿಮಗೆ ಕೊಡಬಹುದು' ಎಂದು ಹೇಳಿದ. ಅದಕ್ಕೆ ಒಪ್ಪಿ ಕಡಾಯಿಯನ್ನು ಕೊಟ್ಟರು. ಬುರುಡೆಯನ್ನು ತೆಗೆದುಕೊಂಡು ಅವನನ್ನು ಕಳುಹಿಸಿ ಕೊಟ್ಟರು. ಕಮ್ಮಾರನ ಹಳ್ಳಿಗೆ ಬಂದ. ಕಡಾಯಿಯ ಒಳಗೆ ಹಣವನ್ನು ಧಾನ್ಯಗಳನ್ನು ಹಾಕಿದ. ಸೂರ್ಯೋದಯದಿಂದ ಸೂರ್ಯಾಸ್ತದ ತನಕ ಅದರಲ್ಲಿ ಹಾಕಿದ ಯಾವ ವಸ್ತುವೇ ಆಗಲಿ ತೆಗೆದಷ್ಟೂ ಖಾಲಿಯಾಗುವುದಿಲ್ಲ ಎಂಬುದನ್ನು ತಿಳಿದುಕೊಂಡ. ತಾನೂ ಅದನ್ನು ಉಪಯೋಗಿಸಿ ಧನಿಕನಾದ. ತನ್ನ ಗೆಳೆಯರಿಗೂ ಕೊಟ್ಟು ಅವರ ಬಡತನವನ್ನು ನೀಗಿಸಿದ.

ಶಿಕ್ಷೆ ವಿಧಿಸಿ ಕಮ್ಮಾರನನ್ನು ಕಾಡಿಗೆ ಕಳುಹಿಸಿದರೆ ಶ್ರೀಮಂತನಾಗಿ ಮರಳಿ ಬಂದ ಎಂದು ನ್ಯಾಯಾಧಿಕಾರಿಗೆ ತಿಳಿಯಿತು. ಮತ್ತೆ ಕಮ್ಮಾರನ ಬಳಿಗೆ ಬಂದ. 'ಕಾಡಿನಲ್ಲಿರುವ ರಾಕ್ಷಸರಿಗೆ ಬುರುಡೆ ಕೊಟ್ಟು ಅಕ್ಷಯದ ಕಡಾಯಿ ತಂದೆಯಂತಲ್ಲ. ನನಗೂ ಅಂತಹ ಒಂದು ಕಡಾಯಿ ತೆಗೆಸಿಕೊಡು. ಇಲ್ಲವಾದರೆ ನೀನು ರಾಕ್ಷಸರ ಕಡಾಯಿಯನ್ನು ಕದ್ದು ತಂದೆಯೆಂಬ ಆರೋಪ ಹೊರಿಸಿ ಶಿಕ್ಷಿಸಬೇಕಾಗುತ್ತದೆ'. ಎಂದು ಹೆದರಿಸಿದ. ಕಮ್ಮಾರ ನಗುತ್ತ 'ನಿಮಗೆ ಇಲ್ಲ ಅನ್ನುವುದುಂಟೆ? ನಿಮ್ಮ ಬಳಿ ಬುರುಡೆಗಳಿದ್ದರೆ ರಾಕ್ಷಸರಿಗೆ ಕೊಂಡು ಹೋಗಿ ಕೊಡಿ. ಒಂದು ಬುರುಡೆಗೆ ಒಂದು ಕಡಾಯಿ ಕೊಡುತ್ತಾರೆ' ಎಂದು ಹೇಳಿದ. ನ್ಯಾಯಾಧಿಕಾರಿ ಒಂದು ಗೋಣಿ ಚೀಲದಲ್ಲಿ ಹಳೆಯ ಬುರುಡೆಗಳನ್ನು ತುಂಬಿಸಿ ನೆಟ್ಟಗೆ ಕಾಡಿಗೆ ಹೋದ. ರಾಕ್ಷಸರ ಬಳಿಗೆ ತಲುಪಿದ. 'ತಗೊಳ್ಳಿ, ಕಮ್ಮಾರ ಈ ಬುರುಡೆ ಕೊಟ್ಟು ಕಳಿಸಿದ್ದಾನೆ. ಒಂದು ಬುರುಡೆಗೆ ಒಂದು ಕಡಾಯಿ ಕೊಟ್ಟು ಬಿಡಿ' ಎಂದು ಅವರ ಮುಂದಿರಿಸಿದ.

ಕಮ್ಮಾರ ಕೊಟ್ಟ ಬುರುಡೆಗೆ ಏನೂ ಮಹತ್ವವಿಲ್ಲ. ಸುಮ್ಮನೆ ಕಡಾಯಿಯನ್ನು ಕಳೆದುಕೊಂಡೆವು. ಎಂದು ಕೋಪದಿಂದ ಕುದಿಯುತ್ತಿದ್ದ ರಾಕ್ಷಸ ದಂಪತಿಗೆ ಕಮ್ಮಾರನ ಹೆಸರು ಕೇಳಿದಾಗ ಕೋಪ ಇನ್ನಷ್ಟು ಏರಿತು. ನ್ಯಾಯಾಧಿಕಾರಿಯ ಕೈಯನ್ನು ಹಿಡಿದು ತಿರುಚಿದರು. ಕೈಯೊಂದನ್ನು ಮುರಿದರು. ಹಲ್ಲುಗಳನ್ನು ಕಿತ್ತರು. ಕಾಲನ್ನು ಡೊಂಕು ಮಾಡಿದರು. ಕೈಗೊಂದು ಊರುಗೋಲು ಕೊಟ್ಟು ಊರಿನ ದಾರಿ ತೋರಿಸಿ ಕಳುಹಿಸಿ ಕೊಟ್ಟರು. ಕಮ್ಮಾರನಿಗೆ ಮಾಡಿದ ಅನ್ಯಾಯಕ್ಕಾಗಿ ಅವನು ಬದುಕಿಡೀ ಕಷ್ಟದಲ್ಲೇ ಕಳೆಯಬೇಕಾಯಿತು.

ದಕ್ಷಿಣ ಆಫ್ರಿಕಾದ ಕತೆ



ವಿಜಯ ಕುಮಾರಿ

# ಕತ್ತೆಯೂ ಕುದುರೆಯೂ

■ **ಕಿಗ್ಗಾಲು ಎಸ್. ಗಿರೀಶ್, ಮೂರ್ನಾಡು**

ಒಂದು ಕೇರಿಯಲ್ಲಿಯೊಬ್ಬ
ಚಂದುರಾಮನೆಂಬ ಶೆಟ್ಟಿ
ಸಿಂದನೂರಿನಲ್ಲಿ ಸಂತೆಗೆಂದು ಹೊರಟನು
ದಂಧೆಗಿರಲಿ ಯೆನುತಲವನು
ತಂದು ಕುದುರೆ ಕತ್ತೆಗಳನು
ಮುಂದೆ ಸಾಗಿ ಸಂತೆಯಲ್ಲಿ ಕಟ್ಟಿಹಾಕಿದ!

ಸಂತೆಯಲ್ಲಿಯಾತ ಮೂರು
ಮೆಂತೆ ಮೂಟೆಗಳನು ಕೊಂಡು
ನಿಂತ ಕತ್ತೆ ಬೆನ್ನಮೇಲೆ ಹಾಕಿ ಹೊರಟನು
ಇಂತುಟಿರುವ ಮೂಟೆಗಳನು
ನಿಂತು ನೋಡುತಿರುವ ಕುದುರೆ
ಸಂತಸವನು ಬೀರಿ ಮನದ ತುಂಬ ನಕ್ಕಿತು!

ತನ್ನ ಜೊತೆಗೆ ತಂದ ಕತ್ತೆ
ಬೆನ್ನ ಮೇಲೆ ಮಡಗಿ, ಕುದುರೆ
ಜೊತೆಗೆ ಮಾಡಿ ಶೆಟ್ಟಿ ಬೇಗ ಕಳುಹಿದ
ಬನ್ನವಾಯ್ತು ತನಗೆ ಭಾರವಿನ್ನು
ನಾನು ತಾಳಲಾರೆ
ತನ್ನ ಅರ್ಧ ಪಾಲು ಹೊರಲು ಕತ್ತೆ ಬೇಡಿತು!

ಕತ್ತೆ ನೀನು ಹೊರುವುದಲದೆ
ಮತ್ತೆ ಕುದುರೆ ಹೊರುವುದುಂಟೆ
ತೊತ್ತು ನೀನು ನಿನಗೆ ಹೊರುವುದಷ್ಟೆ ಕೆಲಸವು
ಹೊತ್ತು ಮುಳುಗುವುದಕೆ ಮೊದಲೆ
ಕುತ್ತ ತೋರದಂತೆ ತಲುಪು
ಗತ್ತಿನಲ್ಲಿ ಕುದುರೆ ನಿಂತ ಕತ್ತೆಗಂದಿತು!

ದಾರಿಯಲ್ಲಿ ಸಾಗುವಾಗ
ಭಾರದಿಂದ ಬಳಲಿ ಕತ್ತೆ
ಜಾರಿ ಕಾಲು ಕೆಳಗೆ ಬಿದ್ದು ಸತ್ತುಹೋಯಿತು
ದೂರದಿಂದ ಬಂದ ಶೆಟ್ಟಿ
ಬೇರೆ ದಾರಿ ಕಾಣದಾಗೆ
ಪೂರ ಮೂಟೆ ಜೊತೆಗೆ ಹೆಣವ ಕುದುರೆಗೇರಿಸಿದ!

ಆಗ ನಾನು ಕತ್ತೆಯರ್ಧ
ಭಾಗ ಹೊರಲು ಸಿದ್ಧವಾಗೆ
ಈಗ ನನಗೆ ಕತ್ತೆ ಹೆಣವ ಹೊರಿಸುತಿದ್ದರೆ?
ಗೋಗರೆಯುತ ಕತ್ತೆ ಬಹಳ
ಕೂಗಿ ತನ್ನ ಬೇಡಿದಾಗ
ಹಾಗೆ ಹೀಗೆಯೆಂದು ನಾನು ನುಡಿದೆನೇತಕೆ?!|

ಕೇಳು ಕಂದ ಬೇರೆಯವರು
ಗೋಳು ನಿನಗೆ ಹೇಳುವಾಗ
ಕೇಳದಂತೆ ನಟಿಸಿ ನೀನು ಬೀಗಬೇಡವೋ
ಹೇಳಲೇನು ಬಾಳಿನಲ್ಲಿ
ಪಾಳಿಯಂತೆ ನಿನಗು ಕಷ್ಟ
ನಾಳೆ ಬರಲು ನಿನಗೆ ನೇಹ ಕರವು ಬೇಕೆಲೋ!

---

ಕುತ್ತ=ಕಷ್ಟ
ಇಂತುಟಿರುವ= ಹೀಗಿರುವ

